ಶ್ರೀ ಎಚ್. ಎನ್. ನಂಜೇಗೌಡ .—ಮಾನ್ಯ ಸದಸ್ಯರು ಕೇಳಿರತಕ್ಕಂಥ ಸ್ಥಳದಲ್ಲಿ ಅಲ್ಲ. ಆದರೆ ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕ್, ಕಾನ್ಲೆ ಬಳಿ ಒಂದು ಪ್ರಾಜೆಕ್ಟ್ ಮಾಡಬೇಕೆಂದು ಕೇಂದ್ರ ಸರ್ಕಾರದವರಿಂದ ಕ್ಲಿಯರೆನ್ಸ್ ಕೇಳಿದ್ದೇನೆ.

ಶ್ರೀ ಎಫ್. ಎಸ್. ತಾವರೆ .— ಬೇಸಿಗೆಯಲ್ಲಿ ನೀರೆಲ್ಲಾ ಒಣಗಿಹೋಗಿ ಜನರು ತೊಂದರೆ ಪಡುವುದು ಒಂದು ರೀತಿಯಾದರೆ, ಮಳೆಗಾಲದಲ್ಲಿ ಪ್ರವಾಹ ಬಂದು ಜನರು ತೊಂದರೆ ಅನುಭವಿಸುವುದು ಇನ್ನೊಂದು ರೀತಿಯದಾಗಿದೆ. ಇದನ್ನು ತಡೆಗಟ್ಟುವುದಕ್ಕೆ ವರದಾನದಿಗೆ ಅಡ್ಡಲಾಗಿ ಒಂದು ಮೇಲ್ಕಟ್ಟೆಯ ಅಡ್ಡಕಟ್ಟೆಯನ್ನು ನಿರ್ಮಾಣ ಮಾಡತಕ್ಕಂಥ ಯೋಜನೆಯನ್ನು ಜಾಗ್ರತೆ ಕಾರ್ಯಗತ ಮಾಡುತ್ತೀರಾ ?

SRI H. N. NANJE GOWDA .— That we will consider.

CLOTH PRODUCED BY POWERLOOMS OWNERS

436. SRI P. M. BANGI (Jamkhandi).—Will the Minister for Industries be pleased to state .—

(*a*) whether the licences for all powerlooms in Bijapur District are issued on the condition that only white cloths should be produced on power looms ;

(*b*) whether the Government is aware that about 1,300 powerlooms owned by Master Weavers and Co-operative ocieties in Jamkhandi Taluk are producing coloured sarees and are thus contravening the order No. CER/10/66 dated 9th November 1966 issued by Textile Commissioner under Essential Commodities Act, 1955 ;

(*c*) the reasons for not talking penal or other action against the powerloom owners and the office bearers of those Societies for contravening the orders Government ?

SRI S M. KRISHNA (Minister for Industries) .—

(*a*) No; The restriction is that coloured sarees should not be manufactured on powerlooms.

(*b*) Yes.

(*c*) Instructions have been issued to the Officers concerned to take effective steps to prohibit if necessary by invoking the provisions of penal action under law.

ಶ್ರೀ ಪಿ. ಎಂ. ಬಾಂಗಿ .—(೩)ಗೆ ಉತ್ತರವಾಗಿ ಉತ್ತರ ಕೊಡುತ್ತಾ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಹೇಳಿದ್ದೀರಿ ; ಯಾವ ಯಾವ ಅಧಿಕಾರಿಗಳಿಗೆ ಸೂಚನೆಗಳನ್ನು ಕಳುಹಿಸಿದ್ದೀರಿ, ಯಾವಾಗ ಕಳುಹಿಸಿದ್ದೀರಿ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇದುವರೆಗೆ ಕ್ರಮ ಏತಕ್ಕೆ ಕೈಗೊಂಡಿಲ್ಲ ಎಂದು ಕೇಳಬಯಸುತ್ತೇನೆ ?

ಶ್ರೀ ಎಸ್. ಎಂ. ಕೃಷ್ಣ .—ಟೆಕ್ಸ್‌ಟೈಲ್ ಕಮೀಷನರ್ ಅವರ ಆಜ್ಞೆ ಏನಿದೆ ಅದನ್ನು ಜಾರಿಗೆ ತರಬೇಕು ಎಂಬ ನಿರ್ದೇಶನವನ್ನು ಬಿಜಾಪುರ ಜಿಲ್ಲಾಧಿಕಾರಿಯವರಿಗೆ ತಾ. ೧೭-೪-೧೯೭೨ ರಂದು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಪಿ ಎಂ. ಬಾಂಗಿ .—ಆ ಆಜ್ಞೆ ಆಗಿ ೪ ತಿಂಗಳು ಆಯಿತು. ಹೀಗಿದ್ದರೂ ಕೂಡ ಆ ಆಜ್ಞೆಯನ್ನು ಉಲ್ಲಂಘನೆ ಮಾಡಿದವರ ಮೇಲೆ ಏತಕ್ಕೆ ಕ್ರಮತೆಗೆದುಕೊಳ್ಳಲ್ಲಿಲ್ಲ ? ಇದರಿಂದಾಗಿ ಅಲ್ಲಿ ಸಾವಿರಾರು ಜನರು ನಿರುದ್ಯೋಗಿಗಳಾಗಿ ಸಂಯುಕ್ತರಾಷ್ಟ್ರಕ್ಕೆ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ ಕೃಷ್ಣ .—ಹೈಕೋರ್ಟಿನವರಿಂದ ಸ್ಟೇ ಆರ್ಡರು ಬಂದಿದೆ. ಆದ್ದರಿಂದ ಆ ಆಜ್ಞೆಯನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಪಿ ಎಂ. ಬಾಂಗಿ .—ಹೈಕೋರ್ಟಿನಲ್ಲಿ ಪಿಟಿಷನ್ ನಂಬರು ೧೧೦೨ ಮತ್ತು ೧೧೦೫ ಈ ಎರಡು ಪಿಟಿಷನ್‌ಗಳ ಬಗ್ಗೆ ಮಾತ್ರ ಕ್ರಮ ತೆಗೆದುಕೊಂಡಿದ್ದಾರೆ. ಉಳಿದವುಗಳ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ .—ಹೈಕೋರ್ಟಿನ ಸ್ಟೇ ಆರ್ಡರ್ ಈ ಎರಡು ಪಿಟಿಷನ್‌ದಾರರಿಗೆ ಮಾತ್ರ ಅನ್ವಯವಾಗುತ್ತದೆಯೇ ಅಥವಾ ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುತ್ತದೆಯೇ ಎನ್ನುವ ಬಗ್ಗೆ ಸರ್ಕಾರದವರು ಲಾ ಡಿಪಾರ್ಟಮೆಂಟಿನವರ ಅಭಿಪ್ರಾಯವನ್ನು ಕೇಳಿದ್ದರು. ಅದಕ್ಕೆ ಲಾ ಡಿಪಾರ್ಟಮೆಂಟಿನವರು ಆ ಸ್ಟೇ ಆರ್ಡರು ಸಾರ್ವತ್ರಿಕವಾಗಿದೆ ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಗಾಗಲೇ ಸ್ಟೇ ಆರ್ಡರನ್ನು ವೇಕೆಟ್ ಮಾಡುವುದಕ್ಕೆ ಸರ್ಕಾರದವರು ಕೌಂಟರ್ ಅಫಿಡವಿಟ್ ಹಾಕಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಟೆಕ್ಸ್‌ಟೈಲ್ ಕಮಿಷನರೂ ಇದಕ್ಕೆ ಪಾರ್ಟಿ ಆಗಿದ್ದಾರೆ. ಹೈಕೋರ್ಟ್ ರಿಟ್ ಪಿಟಿಷನ್ನಿಗೆ ನೀವು ಅಫಿಡವಿಟ್ ಹಾಕಬೇಕು ಎಂದು ನಾವು ಅವರನ್ನು ಕೇಳಿದ್ದೇವೆ. ಅವರು ಕೌಂಟರ್ ಅಫಿಡವಿಟ್ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಪಿ. ಎಂ. ಬಾಂಗಿ .—ಅವರು ಕೌಂಟರ್ ಅಫಿಡವಿಟ್ ಹಾಕಿದ್ದರೆ ಕೂಡಲೇ ಹಿಯರಿಂಗ್ ಫಿಕ್ಸ್ ಮಾಡಿ ಸ್ಟೇ ಆರ್ಡರ್ ವೇಕೇಟ್ ಮಾಡಿಸುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ .—ಆದಷ್ಟು ತೀವ್ರವಾಗಿ ಸ್ಟೇ ಆರ್ಡರ್ ವೇಕೇಟ್ ಮಾಡಿಸಬೇಕೆಂದು ನಾವು ಸರ್ಕಾರಿ ವಕೀಲರಿಗೆ ತಿಳಿಸಿದ್ದೇವೆ.

ESTIMATE FOR SUPPLYING WATER TO TUMKUR DISTRICT

620. SRI GATTI CHANDRASEKHAR (Gubbi) .—Will the Minister of State for Major Irrigation be pleased to state :—

(*a*) whether an estimate is prepared for supplying water to Tumkr District through canal in the second stage Hemavathy Reservoir ;

(*b*) if so, whether the Government have accorded sanction to them ;

(*c*) whether the Government proposes to start the second stage work immediately?

SRI H. N. NANJE GOWDA (Minister of State for Major Irrigation).-

(*a*) The scheme is under consideration. Estimate is not prepared;

(*b*) Question does not arise.

(*c*) Question does not arise.

ಶ್ರೀ ಗಟ್ಟಿಚಂದ್ರಶೇಖರ .—ಸ್ವಾಮಿ ಹೇಮಾವತಿ ಜಲಾಶಯದಿಂದ ಎರಡನೇ ಹಂತದಲ್ಲಿ ತುಮಕೂರು ಜಿಲ್ಲೆಗೆ ಕಾಲುವೆ ಮೂಲಕ ನೀರು ಸರಬರಾಜು ಮಾಡುವ ಯೋಜನೆ ಪರಿಶೀಲನೆಯಲ್ಲಿದೆ ಅದರ ಅಂದಾಜು ತಯಾರಾಗಿಲ್ಲ ಎಂದು ಹೇಳಿದ್ದೀರಿ, ಈಗಾಗಲೇ ೮ ದಿವಸಗಳ ಮುಂಚೆ ಗುಬ್ಬಿ ಪಟ್ಟಣದಲ್ಲಿ ಇದಕ್ಕೆ ಸಂಬಂಧಪಟ್ಟ ಒಂದು ಸಬ್‌ಡಿವಿಜನ್ ಅನ್ನು ತಾವು ಓಪನ್ ಮಾಡಿದ್ದೀರಿ. ಇದಕ್ಕಾಗಿ ತುಮಕೂರಿನ ಜನತೆ ತಮ್ಮನ್ನು ಅಭಿನಂದಿಸುತ್ತದೆ. ಈ ಯೋಜನೆಯ ಅಂದಾಜನ್ನು ಆದಷ್ಟು ಜಾಗ್ರತೆ ತಯಾರು ಮಾಡಿ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?